(೩) ೨

Regd No B G 155 Sri 4—1—1965

48 th Year ನೇ ವರ್ಷ

Sri 'Satyavadi'
— DAILY —
MYSORE

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ಕಬ್ಬದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೪೦ ನಪೈ

Protect the Cow
ಗೋಸಂರಕ್ಷಣೆ ಮಾಡಿ

ಸತ್ಯವಾದಿ ಪತ್ರಿಕೆಯ ಮುದ್ರಕರು— ಅಂದಾನಿ ಸಿರಸ್ತೇದಾರ್ ಎಂ ವಿ ಸುಬ್ಬರಾಯುರು 2ನೆ ಪುಟ

ಕಂದಾಯ ಪಾವತಿ ಅವಶ್ಯ

ನೈರೋದಿ— ಇಲ್ಲಿಗೆ ನೂರು ಮೈಲಿ ಹೊಂದ ಕೆನಿಯಾದ ನಾರಂ ಜಿಲ್ಲೆಯಲ್ಲಿ ತಂದೆತಾಯಿಗಳು ಕಂದಾಯ ಪಾವತಿ ಮಾಡಿದ ರಶೀತಿ ತೋರಿಸದಿದ್ದರೆ ಅವರ ಮಕ್ಕಳನ್ನು ಸ್ಕೂಲಿಗೆ ಸೇರಿಸಿಕೊಳ್ಳುವುದಿಲ್ಲ

ಎ ಜಿ ಓ

ಬೆಂಗಳೂರು— ಎ ಜಿ ಓ ಗಳಿಗೆ ಹೆಚ್ಚಿಸಿರುವ ಕಟ್ಟೇಭತ್ಯ ಅವರಿಗೆ ಒಪ್ಪಿತವಾಗಿಲ್ಲ : ರಾಜ್ಯದಲ್ಲಿ 1.75 ಲಕ್ಷ ಎ ಜಿ ಓ ಇದ್ದಾರೆ.

ಅಯಬರ ಆಯ್ಕೆ

ಕರಾಚಿ— ಅಧ್ಯಕ್ಷ ಅಯೂಬರು ಮತ್ತೆ 5 ವರ್ಷ ಕಾಲ ಅಧ್ಯಕ್ಷರಾಗಿ ಚುನಾಯಿತರಾದರು

ಪಾಕ್ ಸೈನಿಕರು

ನವದೆಹಲಿ— 60 ಮಂದಿ ಪಾಕ್ ಸೈನಿಕರು ಜಮ್ಮು ವಿನ ಕದನ ವಿರಾಮ ರೇಖೆ ದಾಟಿ ಮುಂದುವರೆದ ಮೈಲಿ ಒಳಗೆ ಬಂದಿದ್ದರೆಂದೂ, ಅವರನ್ನು ಹೊಡೆದೋಡಿಸಲಾಯಿತೆಂದೂ ವಂದಿಯಾಗಿದೆ

ಶಾಲೆಯು ಪುನಾರಂಭ

ಶೈಕ್ಷಣಿಕ ಶಿಬಿರಾವಣಿ

ಆಸ್ಥಾನ ಮುಕಾವಿದ್ವಾನ್, ಧರ್ಮಾಧಿಕಾರಿ ರಾಜಶಾಂತ್ಯಾಸಕ್ಕ, ಜೋತಿರ್ವಿದ್ವನ್ಮಣಿ ಸಂಪತ್ಕೃಷ್ಣ ಡೋಯಿರವರಿಂದ

5 ಮಂಗಳವಾರ ಕವಿಗೆಟ್ಟಶ್ವಣ

ಪೌಂಸಭೆಯಲ್ಲಿ ಗೊಂದಲ

ಕಡೂರು— ಒಂದು ನಿವೇಶನವನ್ನು ಪೌಂಸಭಾ ಸದಸ್ಯರಿಗೆ ಕೊಡಲು ಮಾಡಿದ ನಿರ್ಣಯದ ಬಗ್ಗೆ ಪೌಂಸಭೆಯಲ್ಲಿ ಗೊಂದಲವಾಗಿ ಸಭೆಯನ್ನು ಮುಂದಕ್ಕೆ ಹಾಕಲಾಯಿತು

ನೆರೆಯ ಹಾವಳಿ

ಕಾವೇರಿ— ಅಮ್ಮಳ್ಳಿ ಗ್ರಾಮಕ್ಕೆ ಒಂದು ನರಿ ಪ್ರವೇಶಿಸಿ 22 ಮಂದಿಯನ್ನು ಕಡಿಯಿತು ; ಕಡೆಗೆ ಗ್ರಾಮಸ್ಥರು ಅದನ್ನು ಕೊಂದುಹಾಕಿದರು

ಐರೋಡೆಬೋರರ ಕಂಡ ಹಕ್ಕಿ

ಮೈಸೂರು - ಮಹಾರಾಷ್ಟ್ರದಲ್ಲಿ ದರೋಡೆ ಮಾಡಿದ 24 ಜನರ ಗುಂಪೊಂದು ಸುಳೇಶ್ವರದಲ್ಲಿ ಪತ್ತೆಯಾಗಿದೆ : ಇದರಲ್ಲಿ 18 ಸ್ತ್ರೀಯರು 6 ಜನ ಪುರುಷರು : ಈ ದರೋಡೆಕೋರರು ಕಳೆದ ಎಂಡು ತಿಂಗಳಿಂದ ಗೋಕಾಕ ಜಿಲ್ಲೆಯ ಮುಗಳಿ, ಮೂಡಲಗಿ ಮೊದಲಾದ ಕಡೆ ಅನೇಕ ಕಳ್ಳತನ ಮಾಡಿದ್ದರು : ಚಿಕ್ಕೊಡಿ ತಾಲ್ಲೂಕಿನ ನಿರ್ಲಿ ಸರಕಾರಿ ಅಧಿಕಾರಿಯೊಬ್ಬರ ಬಂಗಾಲೆಯಲ್ಲಿಯ ಬಂಗಾರದ ಮೂರ್ತಿಯನ್ನು ಅಪಹರಿಸಿಕೊಂಡು ಹೋಗಿದ್ದರಲ್ಲದೆ ಮಹಾರಾಷ್ಟ್ರ ರಕ್ಷಣೆಯಲ್ಲೂ ಅನೇಕ ಕಡೆ ಕನ್ನಳವು ಮಾಡಿರುವರೆಂದು ತಿಳಿದುಬಂದಿದೆ. (ಸಂ)

ಕಳ್ಳರ ಕಾರ್ಯ

+

ಬಿಜಾಪುರದಲ್ಲಿ ಒಂದು ಪಹಳಾರಿ ಸಂಘದೊಳಗೆ ಕಳೆದ ವಾರ ಕಳ್ಳರು ನುಸುಳಿ ಗೋಧಿ ಮತ್ತು ಸಕ್ಕರೆ ಮೂಟೆಗಳನ್ನು ಕದ್ದೊಯ್ದರು : ಮರು ದಿನ ರೇಷನ್ ಕಾರ್ಡುಗಳನ್ನು ಹಿಡಿದುಕೊಂಡು ಬಂದವರಿಗೆ ಸಾಖರ್ ಇಲ್ಲ.

—

ತನ್ನ ಮನೆಗೇ ಬೆಂಕಿ ಇಟ್ಟ !

ಕಾಸರಗೋಡಿನ ಕರಂದಕಾಡು ಎಂಬಲ್ಲಿರುವ ಜನರು ಪೂಜಾರಿ ಎಂಬಾತನು ಕಳೆದ ವಾರ ರಾತ್ರಿ ಮದ್ಯಪಾನ ಮತ್ತನಾಗಿ ತನ್ನ ಮನೆಗೆ ತಾನೇ ಬೆಂಕಿ ಕೊಟ್ಟನೆಂದೂ ಮನೆಯು ಪೂರ್ಣ ಧ್ವಂಸವಾಯಿತೆಂದೂ ವಂದಿಯಾಗಿದೆ ; ಈಗ ಅವನು ಬಂಧಿಸಲ್ಪಟ್ಟಿದ್ದಾನೆ.

ವಿಷಪ್ರಾಣಿಗಳ ಕಳವು

ಮಿಯಾಮಿ— ಒಬ್ಬ ಕಳ್ಳನು ಪ್ರಾಣಿ ಸಂಗ್ರಹಾಲಯಕ್ಕೆ ನುಗ್ಗಿ 8 ನಾಗರ ಹಾವು, ಒಂದು ಹೆಬ್ಬಾವು, ಒಂದು ಜಾತಿಯ ವಿಷಸರ್ಪ ಮತ್ತು ಅವಾಯುಕಾರಿ ಹಾವುಗಳಿದ್ದ ಗೂಡು, ಇವೆಲ್ಲವನ್ನೂ ಕದ್ದುಕೊಂಡು ಹೋಗಿವ್ವಾವೆ ; ಯಾರಿಗೂ ಅಪಾಯ ಇಲ್ಲ. ಇವೆಲ್ಲಾ ಈಗ ಎಲ್ಲಿವೆ ಎಂಬುದು ಪೋಲೀಸರಿಗೆ ತಲೆನೋವಾಗಿದೆ.

ಶ್ರೀ ರಾಮಚಂದಿನಿಯವರು

ಬೆಂಗಳೂರು— ನವದೆಹಲಿ ಟೆಲಿಫೋನ್ಸ್‌ಗಳಿಗೆ ಜನರಲ್ ಮ್ಯಾನೇಜರಾಗಿ ವರ್ಗಾಯಿಸಲ್ಪಟ್ಟಿರುವ ಮೈಸೂರು ಸರ್ಕಲ್‌ನ ಪೋಸ್ಟ್‌ಮಾಸ್ಟರ್ ಜನರಲ್ಲಾದ ಶ್ರೀ ರಾಮಚಂದಿನಿಯವರ ಬಗ್ಗೆ ಗೌರವಸೂಚಕವಾಗಿ ಇಲ್ಲಿ ಮೊನ್ನೆ ಸೇರಿದ ಅಂಚೆ-ತಂತಿ ಅಧಿಕಾರಿಗಳ ಸಭೆಯಲ್ಲಿ ಮಾಡಲಾಯಿತು : ಶ್ರೀ ರಾಮಚಂದಿನಿಯವರು ಸೂಕ್ಷ್ಮವಾಗಿ ಉತ್ತರಿಸಿದ್ದರು : ಅವರ ಭಾವಚಿತ್ರವು ಅನಾವರಣ ಮಾಡಲಾಯಿತು.

ವಿಜಯವಾಡ

ವಿಜಯವಾಡ— ಆಂಧ್ರದಲ್ಲಿ ಈ ವರ್ಷ 10 ಸಾವಿರ ಟನ್ ಹೆಚ್ಚು ಮಳೆ ಅಕ್ಕಿ ದೊರೆಯುವುದೆಂದು ಹೇಳಲಾಗಿದೆ.

ಅಮೋನಿಕದ ನೆರವು

ನವದೆಹಲಿ — ಭಾರತಕ್ಕೆ ಒಟ್ಟು 130 ಸಾವಿರ ಟನ್ನುಗಳಷ್ಟು ಮುಸುರೆಸಜೋಳ 50 ಸಾವಿರ ಟನ್ನುಗಳಷ್ಟು ಅಕ್ಕಿ ಮತ್ತು 50 ಸಾವಿರ ಟನ್ನುಗಳಷ್ಟು ಕೊಬ್ಬಿನ ವಸ್ತುಗಳನ್ನು ಅಮೇರಿಕಾ ಪೂರೈಸುವುದು.

ಗೋವಾ ಭವಿಷ್ಯ

ಹೈದರಾಬಾದು— ಗೋವಾ ಭವಿಷ್ಯ ನಿರ್ಧಾರವು ಹತ್ತು ವರ್ಷ ನಂತರ ಆಗುವುದರ ಬದಲು ಈಗಲೇ ಆಗಬೇಕೆಂದೇ ಮುಖ್ಯಾಮಾತ್ಯ, ಮುಖ್ಯ ಮಂತ್ರಿ, ಶ್ರೀ ನಾಥುಸಿಂಗ್ ಹೇಳಿದರು

ಸಮಾಸ್ಪುರ

ಸಮಾಸ್ಪುರ— ಅಂಚೆ ಮತ್ತು ತಂತಿ ಇಲಾಖೆಯು ದಿನಕ್ಕೆ 2 ಕೋಟಿ ಕಾಗದಗಳು, 4 ಲಕ್ಷ ಟೆಲಿಗ್ರಾಂಗಳು, 2 ಲಕ್ಷ ಪಾರ್ಸಲು ಪಿಕ್ಕೆಟ್ಟುಗಳನ್ನು ಕ್ಲಿಯರ್ ಮಾಡುತ್ತಿರುವುದೆಂದು ಸಂಪರ್ಕ ಮಂತ್ರಿ ಶ್ರೀ ಸತ್ಯನಾರಾಯಣ ಸಿನ್ಹ ಹೇಳಿದರು.

ಬೆಂಗಳೂರು

ಬೆಂಗಳೂರು— ನಿನ್ನೆ ಸಂಜೆ ಚಿಕ್ಕಲಾಲ್‌ಬಾಗಿನಲ್ಲಿ ವೈಂಸಮಿತಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಕೆಲವರು ಗಲಭೆ ಮಾಡಿ ಡಿ ಎಂ ಕೆ ಮತ್ತು ಮುಸ್ಲಿಂ ಲೀಗನ್ನು ಪದಿತಿಗೆ ಸೇರಿಸುವಷ್ಟಿ ರುದ್ಧ ಘೋಷಣೆ ಮಾಡುತ್ತಿದ್ದರು : ಕಲ್ಲುಹೊಡೆತದಿಂದ ಹನುಮಂತಯ್ಯ ಎಂಬ ಕಾರ್ಯಕರ್ತನು ಗಾಯಗೊಂಡನು ; ರಸರ್ವ್ ಪೋಲೀಸಿನವರು ಬಂದು ಪರಿಸ್ಥಿತಿ ಹತೋಟಿಗೆ ತಂದರು : ಗೊಂದಲವಾಗಿ ಸಭೆಯು ಪರಿಸಮಾಪ್ತಿಯಾಯಿತು.

ಜಲಂಧರ

ಜಲಂಧರ— ಪಂಜಾಬು ಶಾಸಕ ಸಭೆಯ ಕಾಂಗ್ರೆಸ್ಸು ಪಾರ್ಟಿ ಸದಸ್ಯರು ರೂ 5000 ಜಾತ್ಯಕ್ಕೆ ತೊಡಬೇಕಾಗಿದೆ ; ಇನ್ನುಮೇ ಪ್ರತಿ ಸದಸ್ಯನೂ ಪಾರ್ಟಿ ಫಂಡಿಗೆ ತಿಂಗಳಿಗೆ ರೂ 30 ಕೊಡಬೇಕು.

ಸೇಂಟ್ ಫ್ರಾನ್ಸಿಸ್ ಜೇವಿಯರ್

★

ಈಚೆಗೆ ಗೋವಾದಲ್ಲಿ ನಾಲ್ಕನೇ ಶತಮಾನಗಳಿಂದ ರಕ್ಷಿಸಲ್ಪಟ್ಟಿರುವ ಸೇಂಟ್ ಫ್ರಾನ್ಸಿಸ್ ಜೇವಿಯರಂವರ ಶರೀರವು ಪ್ರದರ್ಶನಕ್ಕಿಟ್ಟು ಗುಂಪುಗುಂಪಾಗಿ ಜನರು ಹೋಗಿ ಸಂದರ್ಶಿಸಿದರಷ್ಟೆ : ಆ ಜೇವಿಯರ್‌ರ ವಿಷಯ ವಿಷಯವನ್ನು ನೋಡಿ : ಕಲ್ಕಾದ 'ವಾಳಿಜಾಸಿ' ಯಲ್ಲಿ ಪ್ರಕಟವಾದ ಲೇಖನದ ಅನುವಾದ ಏದು—

1564 ರಲ್ಲಿ ಸೇಂಟ್ ಜೇವಿಯರು ಪೋರ್ಚುಗಲ್ ರಾಜರಿಗೆ ಕಾಗದ ಬರೆದು 'ಪವಿತ್ರ ವಿಷಯ ಸಂಗ್ರಹ ಸಂಸ್ಥೆ' ಸ್ಥಾಪಿಸಲು ಏರ್ಪಾಡಿಸಿದನು ; ಈ 'ಅಪವಿತ್ರ ಮತ್ತು ದುಷ್ಟ ಸಂಸ್ಥೆ' 250 ತಿಂಗಳಿದ್ದಿತು ; ಅದು ಕ್ರಿಶ್ಚಿಯನ್ನೇತರ ನೀತಿ ಮತ್ತು ಪದ್ಧತಿ ಕ್ರಿಶ್ಚಿಯನ್ನೇತರರ ಮೇಲೆ ಹೇಳಲಾರದಷ್ಟು ನೀಚಕೃತ್ಯಗಳನ್ನು ನಡೆಸಿತು ; ಬೇರೆ ಕಡೆ ಸ್ಥಾಪಿಸಲಾಗಿರುವ ಎಲ್ಲಾ ಸಂಸ್ಥೆಗಳಿಗಿಂತಲೂ ಏನಾದರೂ ಕೀಳಾಗಿ ತೋರಿಸಿಕೊಂಡಿತು.

oo oo

1559 ರಲ್ಲಿ ಒಂದು ಶಾಸನ ಮಾಡಲ್ಪಟ್ಟು, ಹಿಂದೂಗಳು ಯಾವ ಪೌಕಾರಿಕೆಲಸದಲ್ಲೂ ಇರದಂತೆ ಪ್ರತಿಬಂಧಿಸಲಾಯಿತು ; ಅದೇ ವರ್ಷ ಕ್ರಿಶ್ಚಿಯನ್ನೇತರ ಅನಾಥರು ಕ್ರೈಸ್ತ ಮತಕ್ಕೆ ಸೇರಲು ತಿರಸ್ಕರಿಸಿದರೆ, ಅಂಥವರ ಎಲ್ಲ ಆಸ್ತಿಪಾಸ್ತಿಗಳನ್ನೂ ಮುಟ್ಟುಗೋಲು ಹಾಕುವ ಶಾಸನ ಮಾಡಲಾಯಿತು.

oo oo

ಮತ್ತೊಂದು ಶಾಸನವು ಹಿಂದೂದೇವಾಲಯಗಳ ದುರಸ್ತಿ ಎಲ್ಲ ರೀತಿಯ ನಿರ್ಮಾಣಕ್ಕೆ ಅಡ್ಡಿಯಿತ್ತು. ಕ್ರಿಶ್ಚಿಯನ್ನೇತರ ಹಬ್ಬ ಹುಣಿವೆಗಳು ನಿಷೇಧಿಸಲ್ಪಟ್ಟವು.

1560 ರಲ್ಲಿ ಎಲ್ಲ ಬ್ರಾಹ್ಮಣರೂ ಮತ್ತು ಅಕ್ಕಸಾಲಿಗರೂ ಕ್ರೈಸ್ತರಾಗಿ ಮತಾಂತರಗೊಳ್ಳಬೇಕೆಂದೂ, ಅದಕ್ಕೆ ಸಮ್ಮತಿಸದವರನ್ನು ಗೋವಾದಿಂದ ಹೊರದಬ್ಬಲಾಯಿತು.

oo oo

1557 ರಲ್ಲಿ ಮಾಜಿರಾದ ಒಂದು ಶಾಸನದಂತೆ, ಹಿಂದೂಗಳು ಮುಂಜಿ, ಮದುವೆ, ಶವಸಂಸಾರ ಮುಂತಾದ ಅವರ ಆಗಕ್ಕ ಮತ್ತು ಪ್ರಮುಖ ಸಮಾರಂಭ ಆಚಾರಗಳನ್ನು ನೆರವೇರಿಸುವುದನ್ನು ಪ್ರತಿಬಂಧಿಸಲಾಯಿತು.

oo oo

ಇಂಥಹ ಮನುಷ್ಯನ ದೇಹವು ಪ್ರದರ್ಶನಕ್ಕಿಟ್ಟಿದ್ದು, ಮತ್ತು ಇಂಥಹ ಮಹಾನುಭಾವನ ಆವಶೇಷವನ್ನು ನೋಡಲು ಅನುಕೂಲವಾಯಿತೆಂದು ನಾವು ಹಿಂದೂಗಳೂ ಹರ್ಷಗೊಂಡೆವು : ನಾವೇನೋ ಎಲ್ಲಾ ಮತಗಳ ಬಗ್ಗೆ ನಂಬಿಕೆಯುಳ್ಳವರಾಗಿದ್ದೇವೆ ; ಆದರೆ ಅಂತಹ ರಾಕ್ಷಸೀ ಅನಾಗರೀಕತೆಯು ನಮ್ಮ ಪೇಲಿ ಜನ್ಮವೂ ಸಹಿಸುವುದು ಸರಿಯೇ ? ನಿಜಕ್ಕೂ ಹಿಂದೂಗಳ ಬಹು [ದೂರ ಹೋಗುತ್ತಿದ್ದಾರೆ. (Truth)

ಗೋರಕ್ಷಣೆ ಪ್ರಾಣದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Help The ' Gorakshana '

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ

ವಾರ್ಷಿಕ ಚಂದಾ 50 ನೈಸೆ ' ಗೋರಕ್ಷಣ ' ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಪೇಟೆ, ಮೈಸೂರು ೪

ವುಡ್‌ಲ್ಯಾಂಡ್ಸ್ ಜನವರಿಯ 4 ನೇ ವಾರ

ಏಪ್ರಿಲ್ ಫೂಲ್ (ಹಿಂದಿ) April Fool

ಸೈರಾಬಾನು, ದಿಲೀಪ್ ಅಭಿನಯಿಸಿರುವ, ಸ್ವಾರಸ್ಯ ಪ್ರಸಂಗಗಳು, ನಕ್ಕುನಲಿನುವ ಹಾಸ್ಯ ವೈನೋದ, ನೃತ್ಯ ಸಂಗೀತದಿಂದ ಕೂಡಿದ ಮನೋಜ್ಞವಾಸಿತ ಕಲಾಕೃತಿ.

— ಸುಬೋಧ ಮುಖರ್ಜಿಯವರ ಅಮೋಘ ಈಸ್ಟ್‌ಮೆನ್ ಕಲರ್ ಚಿತ್ರ —

ಸಂಗೀತ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ

ತಾಯಿ ಮಡಿಯಲ್ [ತಮಿಳು]

★

ನಟವರ್ಗ— ಎಂ ಜಿ ರಾಮಚಂದ್ರನ್, ಬಿ ಸರೋಜಾದೇವಿ, ನಂಬಿಯಾರ್

ಎಂ ಆರ್ ರಾಧಾ, ಪಂಡರಿಬಾಯಿ, ಮನೋರಮಾ [ದಿನ-3 ಆಟಗಳು]

SHAKTI SUDHA

Superb Tonic

ಆಶೋಕಾ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

.....

ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.

ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

★

ಚಂದಾ ಬಾಕಿ ಇದೆ ಮುಗಿದಿರುವವರು ದಯವಿಟ್ಟು ಶೀಘ್ರವಿತರಿಸಬೇಕಾಗಿ ವಿನಂತಿ

ಹಾ॥ ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತಸುಬ್ಬಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಕರು, ಹೊಂಗಸಂದ್ರ
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು ೪

Edited, Printed & Published by the Proprietor
Dharma Prachara Niratha M. S. Krishna Rao
the Satyavadi Press, Chamrajpuram, Mysore ೪